ಹಂಪಿ ಟೈಮ್ಸ್ HAMPI TIMES

## ಹಣತೆ : ಒಂದು ಸಣ್ಣ ಕಥೆ!



ಒಂದು ದಿನ ಒಂದು ಮನೆಯ ಹಣತೆಯಲ್ಲಿ ಒಂದು ಚಿಕ್ಕ ಭಿನ್ನಾಭಿಪ್ರಾಯ ಶುರುವಾಯಿತು.
ಹಣತೆ " ನನ್ನಿಂದ ದೀಪ ಉರಿಯುತ್ತಿದೆ ಆ ಬೆಳಕು ನನ್ನದು " ಎಂದು ಹೇಳಿತು.

ಇದನ್ನು ಕೇಳಿದ ಹಣತೆಯಲ್ಲಿದ್ದ ಎಣ್ಣೆ " ನಾನು ಆ ದೀಪಕ್ಕೆ ಜೀವಾಳ.ನಾನೇ ಇರದಿದ್ದರೆ ದೀಪವೂ ಇಲ್ಲ, ಬೆಳಕೂ ಇಲ್ಲ ಅದಕ್ಕಾಗಿ ಆ ಬೆಳಕು ನನಗೆ ಸೇರಿದ್ದು" ಎಂದಿತು.

ಇದನ್ನು ಕೇಳಿದ ಬತ್ತಿ " ಊಜಟಟಂ! ನಾನು ಉರಿಯುತ್ತಿರುವದಿಂದಲೇ ದೀಪ ಉರಿಯುತ್ತಿದೆ ಟಂರುಛಿಚಿಟಟಥಿ ಬೆಳಕು ನನ್ನದು "ಎಂದಿತು.

ಈ ಕಚ್ಚಾಟವನ್ನು ಸೂಕ್ಷ್ಮದಿಂದಲೇ ನೋಡುತಿದ್ದ ಗಾಳಿ " ನಾನು ಇಲ್ಲದೇ ದೀಪವು ಉರಿಯಲ್ಲ , ನಾನು ಹೆಚ್ಚಾದರೆ ದೀಪ ಆರಿಹೋಗುತ್ತದೆ ಆದ್ದರಿಂದ ಬೆಳಕು ನನ್ನದು" ಎಂದು ವಾದಿಸಿತು.

ನಾನು ನನ್ನಿಂದ ಎಂಬ ಕಚ್ಚಾಟದಲ್ಲಿ ಹಣತೆ ಒಡೆದು ಹೋಯಿತು. ಎಣ್ಣೆ ಹರಿದು ಹೋಯಿತು. ಬತ್ತಿಗೆ ಎಣ್ಣೆಯಿಲ್ಲದೆ ಕುಗ್ಗಿ ಹೋಯಿತು. ಗಾಳಿ ಜೋರಾಗಿ ಬೀಸಿ ಉರಿಯುತ್ತಿದ್ದ ದೀಪ ಆರಿಹೋಯಿತು !

ಎಲ್ಲವೂ ಒಟ್ಟಾಗಿ ಇರುತ್ತಿದ್ದರೆ ಆ ದೀಪದ ಭರವಸೆಯ ಬೆಳಕು ಎಲ್ಲರ ಪಾಲಾಗಿತ್ತು. " ಅಹಂ ಭಾವನೆಯಿಂದ ಅಂಧಕಾರವೇ ಹೊರತು ಬೆಳಕಿನ ಸಾನಿಧ್ಯವಿಲ್ಲ "

ಆ ಭರವಸೆಯ ಬೆಳಕು ನಿಮ್ಮದಾಗಲಿ.

। ಸಾಮಾಜಿಕ ಜಾಲತಾಣ

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಕಾಡುವ ನಕ್ಷತ್ರ ಆಮೆ





**ರಹಮತ್ ತರೀಕೆರೆ**
**ಸಂಸ್ಕೃತಿ ಚಿಂತಕರು**

ಕನ್ನಡ ವಿಶ್ವವಿದ್ಯಾಲಯಕ್ಕೆ ನಾನು ಸೇರಿದಾಗ (1992), ನಮ್ಮದೇ ಕ್ಯಾಂಪಸ್ ಇರಲಿಲ್ಲ. ಒಂದೆರಡು ವರ್ಷ, ಹೊಳೆದಂಡೆಯಲ್ಲಿದ್ದ ಹಂಪಿಯ ಮಂಟಪಗಳಲ್ಲಿ ಇದ್ದೆವು. ಕ್ಯಾಂಪಸ್ಸಿಗಾಗಿ 650 ಎಕರೆ ಜಾಗ ಮಂಜೂರಾಗಿತ್ತು. ಕುಲಪತಿಗಳಾದ ಚಂದ್ರಶೇಖರ ಕಂಬಾರರು ಒಂದು ದಿನ ಏಳೆಂಟು ಜನರಷ್ಟೆ ಇದ್ದ ನಮ್ಮನ್ನು, ಭಾವೀ ಕ್ಯಾಂಪಸ್ಸಿನ ಜಾಗ ತೋರಿಸಲು ಕರೆದೊಯ್ದರು. ಕಾಮಲಾಪುರದ ಬೇಟೆನಾಯಿಗಳಿಂದ ಹೇಗೊ ಬದುಕುಳಿದಿರುವ ಮೊಲಗಳು, ನಮ್ಮನ್ನು ಕಂಡು ಜಿಗಿದು ಓಡಿದವು. ಬೇಟೆನಾಯನ್ನು ಮೊಲ ಓಡಿಸಿಕೊಂಡು ಬಂದ ಜಾಗವನ್ನು ಸಾಮ್ರಾಜ್ಯ ಕಟ್ಟಲು ಆರಿಸುವ ದಂತಕತೆ ನೆನಪಾಯಿತು.

ಅದೊಂದು ಒಂದೂವರೆ ಕಿಮೀ ಅಗಲ, ಎರಡು ಕಿಮೀ ಉದ್ದದ ಬೆಂಗಾಡು. ಪಾಪಾಸುಕಳ್ಳಿಯೂ ಮುಳ್ಳುಕಂಟಿಗಳೂ ಮೊಳಕಾಲುದ್ದ ಸೂಜಿಮುಳ್ಳಿನ ಹುಲ್ಲೂ ಬೆಳೆದಿದ್ದವು. ನಡುನಡುವೆ ಕಲ್ಲುದುಂಡಿಯ ಬೆಟ್ಟಗಳು, ಕೊರಕಲು ಕಣಿವೆಗಳು ಹಾಗೂ ಸ್ಥಳೀಯರು ಬಗ್ಸೈರಹುಕುಂ ಸಾಗುವಳಿಗೈದ ಗರಸುಮಣ್ಣಿನ ಜಮೀನು ಪಟ್ಟೆಗಳು. ಚುರುಗುಟ್ಟುವ ಬಿಸಿಲಲ್ಲಿ ಕೆರೆ ದಂಡೆಯಿಂದ ನಡೆಯುತ್ತ ದಕ್ಷಿಣ ತುದಿಯಲ್ಲಿರುವ ಗುಡ್ಡಕ್ಕೆ ಹೋಗಿ ತಲುಪಿದೆವು. ಹುಲ್ಲಮುಳ್ಳು ಬಟ್ಟೆಗೆಲ್ಲ ಚುಚ್ಚಿಕೊಂಡು ಶರಶಯ್ಯೆಯ ಭೀಷ್ಮರಾದೆವು..

ವಿಶ್ವವಿದ್ಯಾಲಯವು ಈ ಪ್ರದೇಶದ ಭೂಸ್ವರೂಪವನ್ನು ಹೆಚ್ಚು ಕೆಡಿಸದೆ, ಆಲಯ ಕಟ್ಟಲು ನಿರ್ಧರಿಸಿತು. ಬಂಡೆಗಳನ್ನು ಒಡೆಯದೆ, ದಿಬ್ಬಗಳನ್ನು ಅಗೆಯದೆ, ಹಳೇ ಗಿಡಮರಗಳ ಮೋಟುಗಳನ್ನು ತೆಗೆಯದೆ, ಕೊರಕಲನ್ನು ಮುಚ್ಚದೆ, ಅವನ್ನು ಬಳಸಿಕೊಂಡೇ ಅಂಕುಡೊಂಕಾಗಿ ಹರಿವರಸ್ತೆಗಳನ್ನು ಕಲ್ಪಿಸಿತು. ಸ್ಥಳೀಯ ಪರಿಸರಕ್ಕೆ ಹೊಂದುವ ಸಸಿಗಳನ್ನು ಹಚ್ಚಲಾಯಿತು. ಆದರೆ ಹೊರಗಿನಿಂದ ಹೋದವರು ಏನೇ ಮಾಡಿದರೂ, ಪ್ರತಿ ಸೀಮೆಯ ಪರಿಸರಕ್ಕೂ ತನಗೆ ಏನನ್ನು ಉಳಿಸಿಕೊಳ್ಳಬೇಕು ಉಳಿಸಿಕೊಳ್ಳಬಾರದು ಎಂಬ ಯಾವುದೊ ಒಳತರ್ಕವಿರುತ್ತದೆ. ನಾವು ಹಚ್ಚಿದ ಮೇಫ್ಲವರ್ ಬೀಟೆ ತೇಗದ ಸಸಿಗಳು ಊರ್ಜಿತವಾಗಲಿಲ್ಲ. ತೆಂಗು ಸೊರಗಿತು. 'ಮಾರ್ಗ'ದ ಎಂ.ಎಂ. ಕಲಬುರ್ಗಿಯವರು ನೆಡಿಸಿದ ಗುಲಾಬಿ ತೋಟ ಒಣಗಿತು. ಆದರೆ ಆಲ ಅರಳಿ ಬೇವು ಬದುಕಿದವು. ಹಕ್ಕಿಗಳು ಹಾಕಿದ ಹಿಕ್ಕೆಯ ಬೀಜಗಳಿಂದಾದ ಸಸಿಗಳದ್ದೇ ದೊಡ್ಡಪಾಲು. ಕಾಲು ಶತಮಾನದಲ್ಲಿ ಕುರುಚಲ ಕಾಡು, ತಾನಾಗಿ ಬೆಳೆದು ಆಲಯ ಮತ್ತು ಬಯಲುಗಳೆರಡನ್ನೂ ತನ್ನ ಹಸಿರುಬಾಹುಗಳಲ್ಲಿ ಬಳಸಿ ನಿಂತಿತು. ಮಾವು ಗಂಧ ಬೇವು ಆಲ ಹುಣಸೆ ತಾರೆ ಬಾರೆ ತವಸಿ ಹಾಲೆ ಸೀತಾಫಲ ಕಲ್ಲಾಲ ತಾಳೆ ಹೊಂಗೆ ತುಗಲಿ ತರೆ ಬಾಗೆ ಮಿಟ್ಲೆ ನೇರಳೆ ಮೇಲೆ ಬಂದವು. ಕಳ್ಳಿಸೊಕ್ಕಿತು. ಕವಳೆ ಕಾರೆ ಕಬಳಿ ಪರಗಿ ಬಾರೆ ಪೊದೆಗಳು



ಹಣ್ಣು ಬಿಡತೊಡಗಿದವು. ಅಜ್ಞಾತ ಮುಳ್ಳುಬಳ್ಳಿಯೊಂದು ಬದಿಯ ಮರದ ಮೇಲೇರಿ, ದೀಪಾಲಂಕಾರ ಮಾಡಿದಂತೆ ರಕ್ತಗೆಂಪಿನ ಹಣ್ಣನ್ನು ಬಿಟ್ಟಿತು. ಗುಲಗಂಜಿಯ ಬಳ್ಳಿಗಳಂತೂ ಎಲ್ಲಿಬೇಕಲ್ಲಿ. ಗಿಣಿಹಸಿರು ಬಣ್ಣದ ಸಣ್ಣೆಲೆಗಳ ಗಿಡ್ಡನೆಯ ಮುಳ್ಳುಗಳಿರುವ ತರೇಗಿಡಗಳು ಸುಳಿದೆಗೆದು ಬಂದವು. ಕಲ್ಲುಗಳ ಸಂದಿಯಲ್ಲೇ ಬೇರುತಳೆದು ಬೆಳೆವ ಕಲ್ಲಾಲ ಹಾಲೆ ತುಗಲಿಗಳು,'ಬಂಡೆಗಳ ಮೇಲೆ ಚಿಗುರೊಡೆಯಬೇಕಿದೆ' ಎಂಬ ಸಂಕಲ್ಪವನ್ನು ರುಜುವಾತು ಮಾಡಿದವು. ಹಾಲೆಯಂತೂ ಹಂಗಾಮಿನಲ್ಲಿ ಹೂವಿನ ಚಾದರ ಹೊದ್ದು ನಿಲ್ಲುತ್ತಿತ್ತು. ಕಾಯಿ ಒಣಗಿದ ಕಾಲದಲ್ಲಿ ತುಗ್ಗಲಿ ಗಾಳಿಗೆ ಗಗ್ಗರ ನುಡಿಸುತ್ತಿತ್ತು. ಮಳೆಗಾಲದಲ್ಲಿ ಯಥೇಚ್ಛವಾಗಿ ಕಾಡು ಸಬಸೀಗೆ ಬೆಳೆಯುತ್ತಿತ್ತು. ತೋಟದ ಕೆಲಸಗಾರರು ಕಿತ್ತು ಒಯ್ಯುತ್ತಿದ್ದರು. ನಮಗೂ ಕೊಡುತ್ತಿದ್ದರು.

'ವಿದ್ಯಾರಣ್ಯ' ಹೆಸರಿನ ನಮ್ಮ ಕ್ಯಾಂಪಸ್ಸಿನ ಮಧ್ಯಭಾಗದಲ್ಲಿರುವ ಹಾಸುಬಂಡೆಯ ಮೇಲೆ ನಮ್ಮ ವಿಭಾಗ 'ಅಲ್ಲಮ' ಕಟ್ಟಡ. ಅಲ್ಲಿಂದ ಉತ್ತರಕ್ಕೆ ದಿಟ್ಟಿ ಹಾಯಿಸಿದರೆ, ತುಂಗಭದ್ರೆಯ ಆಜುಬಾಜಿನಲ್ಲಿರುವ ಋಷ್ಯಮುಖ ಅಂಜನಾದ್ರಿ ಮತಂಗಾದಿ ಕಲ್ಲುಬೆಟ್ಟಗಳ ಸರಣಿಯೂ, ಅವುಗಳ ಶಿಖರಗಳಲ್ಲಿ ತಲೆಗೆ ಕಟ್ಟಿದ ಬಾಸಿಂಗಗಳಂತೆ ಗುಡಿಗಳೂ ಕಾಣುತ್ತವೆ. ದಕ್ಷಿಣಕ್ಕೆ ಲೋಹದದಿರಿನ ಸೊಂಡೂರು ಬೆಟ್ಟಗಳ ನಿಡಿದಾದ ಸಾಲು. ಮೂಡಣಕ್ಕೆ ಪಿರಮಿಡ್ಡಿನಂತಿರುವ ಮೊಲ ಕರಡಿ ಚಿರತೆ ಕಾಡುಹಂದಿ ವಾಸಿಸುವ ಬೆಟ್ಟ ಹಿಂಭಾಗದಲ್ಲಿದ್ದ ಹಾಸು ಬಂಡೆಯಲ್ಲೊಂದು ನೀರದೊಣೆಯಿತ್ತು. ಅದರ ಸುತ್ತಲಿದ್ದ ಸಸ್ಯಾವಳಿ ಋತುಮಾನಕ್ಕೆ ತಕ್ಕಂತೆ ಬಾಡುವ ಒಣಗುವ ಚಿಗುರು ಸೊಕ್ಕುವ ಹೂಹಣ್ಣು ಬಿಡುವ ರೂಪಾಂತರ ಅವಸ್ಥೆಗಳಿಗೆ ಸಾಕ್ಷಿಯಾಗುತ್ತ ಮೂರು ದಶಮಾನ ಪೂರೈಸಿದೆ. ಬಂಡೆಯ ಕೆಳಗೆಲ್ಲೊ ಬೇರಿಳಿಸಿದ್ದ ಕಾಡುಮಲ್ಲಿಗೆ ಬೇಸಗೆಯಲ್ಲಿ ಎಲೆಯನೆಲ್ಲ ಸುಡಿಸಿಕೊಂಡು ಸತ್ತೇ ಹೋಯಿತು ಎನ್ನುವಂತೆ ಇರುತ್ತಿತ್ತು. ಒಂದೇ ಮಳೆಗೆ ನಳನಳಿಸಿ ಹಸಿರಾಗಿ ಹೂವುಮೊಗ್ಗು ಬಿಡುತ್ತಿತ್ತು. ಬಯಲುಸೀಮೆಯ ಕುರುಚಲು ಕಾಡು ಬದುಕಿರುವುದೇ ಕಾಯುವ ಸಹನೆಯ ಗುಟ್ಟಿನಲ್ಲಿ, ಬಂಡೆಯ ಬಿರುಕುಗಳಲ್ಲಿ ಹಳದಿಮೈ ಕೆಂಪು ತಲೆ, ಕಪ್ಪುಬೆನ್ನಿನ ಓತಿಗಳು ಅದೆಷ್ಟು ಶತಮಾನಗಳಿಂದಲೂ ಇದ್ದಾವೊ? ಅವುಗಳ ಪೂರ್ವಜರು ಬೇಟೆಗೆ ಬರುತ್ತಿದ್ದ ವಿಜಯನಗರದ ದೊರೆಗಳನ್ನು ನೋಡಿರಬಹುದು. ಹಾದುಹೋದ ಸೈನಿಕರ ಪದಾಘಾತ ಆಲಿಸಿರಬಹುದು. ಅವು ನಮ್ಮನ್ನು ಕಂಡೊಡನೆ ಬುಳಕ್ಕನೆ ಬಂಡೆಸಂದಿನಲ್ಲಿ ಅಡಗುತ್ತಿದ್ದವು.

ಕ್ಯಾಂಪಸ್ಸಿನ ಕಾಡುಹಣ್ಣು ತಿನ್ನಲು ಎಲ್ಲೆಲ್ಲಿಂದಲೊ ಪಕ್ಷಿಗಳು ಬರುತ್ತಿದ್ದವು. ಒಮ್ಮೆ ಬುಲಬುಲ್ ಜೋಳದಕಾಳಿನಂತಿದ್ದ ಬಿಳಿಯ ಹಣ್ಣುಗಳನ್ನು ಮೆಳೆಯ ಮೇಲೆ ಕೂತು ಮುಕ್ಕುವುದನ್ನು ಕಂಡೆ. ನಮ್ಮ ಕಣ್ಣಲ್ಲಿ ಅನುಪಯುಕ್ತ ಎನಿಸಿದ ಗಿಡಗಂಟೆಗಳು ಹಕ್ಕಿಗಳ ಪಾಲಿಗೆ ಸೂರು ಮತ್ತು ಅನ್ನದ ತಟ್ಟೆಗಳು, ಕಲ್ಲಕೋಳಿಗಳು ನಮ್ಮನ್ನು ಕಂಡರೆ ನಿಮ್ಮ ಸಹವಾಸ ಬೇಡ ಎಂಬಂತೆ ನಿಧಾನಕ್ಕೆ ಪೊದೆಯಲ್ಲಿ ಮರೆಯಾಗುತ್ತಿದ್ದವು. ಒಮ್ಮೆ ಕ್ಯಾಂಪಸ್ಸಿನಲ್ಲಿ ಹರಿವ ತೊರೆಯ ಬದಿ ಕೇಸರಿ ಮತ್ತು ಬಿಳಿ ಬಣ್ಣ ಪ್ಯಾರಡೈಜ್ ಫ್ಲೈಕ್ಯಾಚರುಗಳನ್ನು (ಸ್ವರ್ಗದ ನೊಣಹಿಡುಕ) ಕಂಡೆ. ಪಶ್ಚಿಮಘಟ್ಟದ ಈ ಪಕ್ಷಿಗಳನ್ನು ಹಿಂದಿನಿಂದಲೂ ಇಲ್ಲಿವೆಯೊ ಅಥವಾ ಕಾಡುಬೆಳೆದ ಬಳಿಕ ವಲಸೆ ಬಂದವೊ ತಿಳಿಯದು. ಸೊಂಡೂರು ಕಾಡಿನಲ್ಲಿ ತೊರೆ ಹರಿವ ಪ್ರದೇಶಗಳಲ್ಲೆಲ್ಲ ಇವಿರುವುದು ಗಮನಕ್ಕೆ ಬಂದಿತು. ಬಹುಶಃ ಮೈನಿಂಗ್ ಕೋಲಾಹಲವು ದಟ್ಟವಾಗಿ ಬೆಳೆದು ಆಶ್ರಯದಾಣದಂತೆ ತೋರುವ ವಿದ್ಯಾರಣ್ಯಕ್ಕೆ ಅವನ್ನು ಓಡಿಸಿರಬಹುದು. ಮಧುರವಾಗಿ ಸಿಕ್ಕುಹಾಕುವ ಒಂದು ಪುಟ್ಟಹಕ್ಕಿ ಹಾಡನ್ನಂತೂ ಸಾವಿರ ಸಲ ಕೇಳಿರುವೆ. ಅದು ಕಣ್ಣಿಗೆ ಕಾಣಿಸಿದ್ದು ಕಡಿಮೆ. ಇವಕ್ಕೆಲ್ಲ ಹೋಲಿಸಿದರೆ ಭಂಡುಬಿದ್ದ ನವಿಗಳು ಕ್ಯಾರೆಯೆನ್ನದೆ ಓಡಾಡುತ್ತಿದ್ದವು. ಒಮ್ಮೆ ಒಂದು ಮರಿಗಳನ್ನು ಕರೆತಂದ ತಾಯಿನವಿಲು ನಾನು ತರಗತಿಯಲ್ಲಿರುವಾಗ, ಕಿಟಕಿಯವರೆಗೆ ಕತ್ತೆತ್ತಿ ಇಣುಕಿ, ಉದಾಸೀನದಲ್ಲಿ ಹೊರಟುಹೋಯಿತು. ಮೊಲ, ಕಲ್ಲಕೋಳಿ, ಗೌಜುಗಗಳು ಸಂಜೆಯ ನಿಶ್ಯಬ್ದದಲ್ಲಿ ರಸ್ತೆಗಿಳಿಯುತ್ತಿದ್ದವು.

ನನ್ನ ಖೋಲಿಯ ತೆಂಕುದಿಕ್ಕಿನ ಕಿಟಕಿ ತೆರೆದರೆ ಆಗಸ ಕಾಣದಷ್ಟು ಮರಗಿಡಗಳಿದ್ದವು. ಅವುಗಳಲ್ಲೊಂದು ಛತ್ರಿಮರ ಕೆಳಗೆ ಬಂಡೆಸಿಕ್ಕಿದ್ದರಿಂದಲೋ ಏನೊ, ಒಣಗಿತು. ಒಂದು ದಿನ ಎರಡು ಕಂಚುಗಾರ ಹಕ್ಕಿಗಳು ಬಂದು ಕುಟ್ಟತೊಡಗಿದವು. ಅದು ನಮ್ಮ ಕುಲುಮೆಯ ಅಡಿಗಲ್ಲ ಸದ್ದನ್ನು ನೆನಪಿಸುವಂತಿತ್ತು. ಅವು ಅಲ್ಲಿದ್ದು ಎರಡು ಮೂರು ಬೀಡು ಮರಿಗಳನ್ನು ಮಾಡಿದವು. ಮರವು ಗೆದ್ದಲು ಹಿಡಿದು ಕುಸಿಯಿತು. ಕಂಚುಗಾರಗಳು ಬೇರೊಂದು ಒಣಮರ ಹುಡುಕಿ ಹೋದವು. ನಿಸರ್ಗದ ಲೀಲಾವಿಲಾಸದಲ್ಲಿ ಮರ ಒಣಗುವುದೂ ಮುಖ್ಯ. "ಇಲ್ಲಿ ಯಾರೂ ಅಮುಖ್ಯರಲ್ಲ, ಯಾವುದೂ ಯಃಕಶ್ಚಿತ್ತಲ್ಲ".

ನಾನು ಕ್ಯಾಂಪಸ್ಸಿನ ಕಾಡಿನಲ್ಲಿ ಸುಮ್ಮನೆ ಗರಗರ ತಿರುಗುತ್ತಿದ್ದೆ. ಕೆಲವೊಮ್ಮೆ ವಿದ್ಯಾರ್ಥಿಗಳೂ ಜತೆಗೂಡುತ್ತಿದ್ದರು. ಅಲ್ಲಿನ ಗಿರಿಸೀಮೆ ಭಾಗದ ಕಾಡು ಬಹಳ ಸುಂದರವಾಗಿತ್ತು . ಅಲ್ಲೊಂದು ಸಣ್ಣಝರಿ ಹರಿಯುತ್ತದೆ. ಸುತ್ತ ಕೋಟೆ ಕಟ್ಟಿದಂತಿರುವ ದಟ್ಟ ಹಳುವಿನಿಂದ ಧುತ್ತನೆ ಚಿರತೆ ಕರಡಿ ಹಾರಿ ಹೊರಬಹುದೇ ಎಂಬ ಅಳುಕಿನಲ್ಲೇ ಅದರ ಚೆಲುವನ್ನು ಆಸ್ವಾದಿಸಬೇಕಿತ್ತು. ವಿದ್ಯಾರಣ್ಯದಲ್ಲಿ ಅನಾಮಿಕ ಮರವೊಂದು ಮಂಡಕ್ಕಿ ಅಂಟಿಸಿದಂತೆ ಸಣ್ಣನೆಯ ಹೂಬಿಡುತ್ತದೆ. ಮೈತುಂಬ ಮೊಗ್ಗಿನ ಚಾದರ ಹೊದಿಸಿದಂತೆ. ಅ ಹೂವು ಎಷ್ಟು ಸಣ್ಣದೆಂದರೆ, ದುಂಬಿ ಕೂರಲೂ ತಾವಿಲ್ಲ. ಅವು ಹಾರುತ್ತಲೇ ಸೂಜಿಮೂತಿಯನಿಟ್ಟು ಮಧುವನ್ನು ಹೀರುತ್ತಿದ್ದವು. ಮರದಡಿ ನಿಂತರೆ ನೂರು ಕಿನ್ನರಿ ನುಡಿಸುವ ಸಂಗೀತಗೋಷ್ಠಿಯೊಳಗೆ ಇದ್ದಂತಾಗುತ್ತಿತ್ತು. ಒಣಗಿದ ಬಿದಿರು ಮೆಳೆಗಳಲ್ಲಿ ಜೀರುಂಡೆಗಳು ರಂಧ್ರ ಕೊರೆದು ಮನೆ ಮಾಡುತ್ತಿದ್ದವು. ತಮ್ಮ ತೂತುಮನೆಗಳಿಗೆ ಬಂದುಹೋಗುವ ಧಾವಂತದಲ್ಲಿ ಹಳುವನ್ನೇ ಕೊಳಲ ಮೇಳವನ್ನಾಗಿ ಪರಿವರ್ತಿಸುತ್ತಿದ್ದವು.

ನಾನು ಕ್ಯಾಂಪಸ್ಸಿಗೆ ಜನಸಂದಣಿ ಇರುವ ಹಂಪಿ ರಸ್ತೆಯನ್ನು ಬಿಟ್ಟು ಬಳ್ಳಾರಿ ರಸ್ತೆಯ ಮೂಲಕವೇ ಬರುತ್ತಿದ್ದೆ. ಇದು ತುಸು ದೂರವಾದರೂ, ನಾಲ್ಕು ಕಿಮೀ ಬಿಳಿಕಲ್ಲು ಅರಣ್ಯದೊಳಗೆ ಹಾಯುವ ಆನಂದ ಸಿಗುತ್ತಿತ್ತು. ಒಮ್ಮೆ ದೂರದಲ್ಲಿ ಕಪುರಸ್ತೆಯ ಮೇಲೆ ಯಾರೋ ನಿಧಾನವಾಗಿ ಸಾವರಿಸಿಕೊಂಡು ತೆವಳುತ್ತಿರುವುದು ಕಂಡಿತು. ಕಾರು ನಿಲ್ಲಿಸಿ ನೋಡಿದೆ. ಮುದ್ದಾದ ನಕ್ಷತ್ರ ಆಮೆ. ಕಪ್ಪುಬೋಕಿಯ ಮೇಲೆ ಸುಣ್ಣದ ಗೆರೆಯ ಕಲಾವಿದ. ತೆಳಗೆ ಬಿಳಿರಬ್ಬರಿನಂತಹ ತೆವಳುದೇಹ. ಹಂಪಿ ಪ್ರವಾಸಿಗಳ ಗಾಡಿಗಳು ಸರಭರ ಹಾಯುವ ರಸ್ತೆಯಲ್ಲಿ ಸವಾರಿ ಹೊರಟಿದೆ–ಮಹಾ ನಿಧಾನದಲ್ಲಿ.ಎತ್ತಿ ಪಕ್ಕದ ಪೊದೆಗೆ ಬಿಟ್ಟೆ. ಬಿಸಿಲ ಈ ಕುರುಚಲು ಕಾಡಲ್ಲಿ ಯಾವೆಲ್ಲ ಜೀವರಾಶಿಗಳಿವೆಯೊ? ಪುಟ್ಟಕೂರ್ಮ ಹೇಗೆ ಸಂಭಾಳಿಸುತ್ತದೆಯೋ ತನ್ನ ಸಂತತಿಯನ್ನು ನಿಷ್ಕರುಣ ವಾಹನಗಳು ಹಾಯುವ ರಸ್ತೆಯಲ್ಲಿ?

ಮೊದಲ ದಿನಗಳಲ್ಲಿ ನಮಗಿಂತ ಮೊದಲೇ ಹೋಗಿರುತ್ತಿದ್ದ ಹಾವುಗಳು ಕೋಣೆಗಳಲ್ಲಿ ಸ್ವಾಗತಿಸುತ್ತಿದ್ದವು. ಹಾವುಗಳು ಕ್ರಮೇಣ ಕಡಿಮೆಯಾದವು. ಅತಿಕ್ರಮ ಪ್ರವೇಶಿಗಳ ಪ್ರತಿನಿಧಿಯಂತಿದ್ದ ನನಗೆ, ನಾಗರಿಕ ಸೌಲಭ್ಯದ ರಸ್ತೆ ಕಟ್ಟಡಗಳ ಹಿಂಸಾತ್ಮಕ ಮುಖ ಅನುಭವಕ್ಕೆ ಬರತೊಡಗಿತು. ಬಿಳಿಕಲ್ಲು ಬೆಟ್ಟದ ಕಾಡಿನಲ್ಲಿ ಟೈರುಗಳಿಗೆ ಸಿಕ್ಕ ಓತಿ ಅಳಿಲು ಹಾವು ಕಪ್ಪೆಗಳ ಕಳೇವರಗಳು ಕಾಣುತ್ತಿದ್ದವು. ರಸ್ತೆಗೆ ಹಪ್ಪಳವಾಗಿ ಅಂಟಿಕೊಂಡಿದ್ದ ಒಂದು ರಸೆಲ್ ವೈಪರಿನ ಸುಂದರ ಚರ್ಮದ ಕನ್ನಡಿಗಳು, ರಸ್ತೆಗೆ ಬಿಡಿಸಿದ ರಕ್ತದ ರಂಗೋಲಿಯಾಗಿದ್ದವು. ನಾನು ಕಾಡಿನ ಹಾದಿಯಲ್ಲಿ ವೇಗ ಕಡಿಮೆ ಮಾಡಿದೆ. ಈಗ ಹೋದರೂ ಮೈತುಂಬ ಎಚ್ಚರದಲ್ಲಿ ಗಾಡಿ ನಡೆಸುತ್ತೇನೆ. ಹಿಂದೆ ನಾನು ಪೊದೆಗೆ ಬಿಟ್ಟಿದ್ದ ನಕ್ಷತ್ರ ಚಿಪ್ಪಿನ ಆಮೆಯ ಮಕ್ಕಳು ಮರಿಮಕ್ಕಳು ಎಲ್ಲಿಯಾದರೂ ಭೇಟಿಯಾಗಬಹುದೇ ಎಂದು ಅತ್ತಿತ್ತ ದಿಟ್ಟಿ ಹಾಯಿಸುತ್ತೇನೆ.

ಮಲೆನಾಡಿನ ಕಾಡೇ ಕಾಡು ಎಂಬ ವ್ಯಸನದಲ್ಲಿದ್ದ ನನಗೆ, ಬಯಲುಸೀಮೆಯ ಕುರುಚಲು ಕಾಡುಗಳ ಚೆಲುವನ್ನು ಹಂಪಿ ಮನಗಾಣಿಸಿತು. ಉತ್ತರ ಕರ್ನಾಟಕದ ಸಾಂಸ್ಕೃತಿಕ ಲೋಕವೂ ನನಗೆ ಹಂಪಿಗೆ ಹೋದ ಬಳಿಕವೇ ದರ್ಶನ ಕೊಟ್ಟಿತು.

(ಪಟಗಳು: ಶಿವಶಂಕರ ಬಣಗಾರ)



